ಮೇಲಷ್ಟೇ ಆತ ವಾಪಸು ಬರುತ್ತಿದ್ದಿರಬೇಕು. ನನಗೆ ಅದು ಗೊತ್ತೇ ಆಗ್ತಿರಲಿಲ್ಲ. ಜರೂರು ತನಿಖೆಗಾಗಿ ಆತ ಹಾಗೆ ಮಾಡುವುದಿತ್ತು. ಆದರೆ ಆ ಸಂಜೆ ನಮ್ಮನ್ನು ಭೇಟಿ ಮಾಡಲು ಚಿನ್ನಪ್ಪ ಬಂದಿದ್ದ! ಆತ ತುಸು ಗಾಬರಿಗೊಂಡಂತಿತ್ತು.

"ಕರಮಚಂದ ಅವರಿಲ್ವೆ? ತುರ್ತಾಗಿ ಮಾತಾಡುವುದಿತ್ತು."

"ಅವರಿಲ್ಲ. ನೀವು ವಿಷ್ಯ ತಿಳಿಸಿದ್ರೆ, ಅವ್ರಿಗೆ ಹೇಳ್ತೀನಿ."

"ರುದ್ರಮುನಿಗೆ ಸಂಬಂಧಿಸಿದ ವಿಚಾರ. ಕುಟ್ಟಯ್ಯರನ್ನ ರುದ್ರಮುನಿ ಬ್ಲಾಕ್‌ಮೇಲ್ ಮಾಡ್ತಾ ಇದ್ದ!" ಪಿಸುಗುಟ್ಟುವ ದನಿಯಲ್ಲಿ ಹೇಳಿದ. ಆತ ಮುಂದುವರೆದು,

"ಕುಟ್ಟಯ್ಯರಿಗೆ ಎಸ್ಟೇಟಿನ ಒಬ್ಬಳು ಹೆಣ್ಣಿನೊಂದಿಗೆ, ಲೀಲಾ ಅಂತ ಆಕೆಯ ಹೆಸರು, ಅನೈತಿಕ ಸಂಬಂಧವಿತ್ತು. ಕುಟ್ಟಯ್ಯರ ಹೆಂಡ್ತಿ ತುಸು ಜೋರಿನ ಹೆಂಗ್ಸು. ಆಕೆಗೆ ಗೊತ್ತಾದ್ರೆ ತೊಂದ್ರೆ ಅಂತ ಕುಟ್ಟಯ್ಯರಿಗೂ ಗೊತ್ತು. ಅದನ್ನು ಬಲ್ಲ ರುದ್ರಮುನಿಯು ಕುಟ್ಟಯ್ಯರು ಲೀಲಾಳ ಜೊತೆಯಿದ್ದಾಗ ಫೋಟೊ ತೆಗೆದು, ಅವರನ್ನು ಹಣಕ್ಕಾಗಿ ಪೀಡಿಸತೊಡಗಿದ್ದ. ಈ ಕೆಲ್ಸದಲ್ಲಿ ಲೀಲಾಳೂ ಅವ್ನಿಗೆ ಸಹಾಯ ಮಾಡಿರಬೇಕೆಂದು ನನ್ನ ಗುಮಾನಿ. ರುದ್ರಮುನಿ ನನ್ನಲ್ಲಿ ಹೇಳ್ದ ಪ್ರಕಾರ ಕುಟ್ಟಯ್ಯರಿಂದ ಅವ್ನು ಆವಾಗ್ಲೇ ಮೂರು ಲಕ್ಷದಷ್ಟು ಹಣ ವಸೂಲು ಮಾಡಿದ್ನಂತೆ. ಆಮೇಲೆ ಕುಟ್ಟಯ್ಯರಿಗೆ ರುದ್ರಮುನಿಯ ಮೇಲೆ ಸಂಶಯ ಬಂದಿರ್ಬೇಕು. ರುದ್ರಮುನಿಯ ಮನೆಲಿ ಕಳ್ಳತನ ಮಾಡ್ಸಿದ್ದು ಕುಟ್ಟಯ್ಯರೇ ಅಂತ ಗುಸುಗುಸು. ರುದ್ರಮುನಿ ಹಣವನ್ನ ಮನೆಲಿ ಇರಿಸಿರಬೇಕೆಂದು ಅನುಮಾನವಿದ್ದಿರಬೇಕು. ಹಣ ಸಿಕ್ತೋ, ಇಲ್ವೋ ಅಂತ ಗೊತ್ತಿಲ್ಲ. ಆದ್ರೆ ಅದು ತಾತ್ಕಾಲಿಕ ಪರಿಹಾರ. ರುದ್ರಮುನಿ ಪುನಃ ಬ್ಲಾಕ್‌ಮೇಲ್ ಮುಂದರಿಸುವ ಸಾಧ್ಯತೆ ಇದ್ದೇ ಇದೆಯಲ್ವೆ? ಹಾಗಾಗಿ, ಆತ ನಾಪತ್ತೆಯಾಗಿದ್ದರಲ್ಲಿ, ಕುಟ್ಟಯ್ಯರ ಕೈವಾಡ ಇರಲೂಬಹುದು."

"ಕುಟ್ಟಯ್ಯರಿಗೆ ಅನೈತಿಕ ಸಂಬಂಧ ಇರೋ ವಿಚಾರ ಯಾರಿಗೆಲ್ಲಾ ಗೊತ್ತು?"

"ಅದು ಯಾರಿಗೂ ತಿಳಿದ ಹಾಗಿಲ್ಲ. ನನ್ಗೆ ಇದನ್ನ ಹೇಳಿದೋನು ರುದ್ರಮುನಿಯೇ. ಇನ್ನೊಂದು ವಿಚಾರ... ಭಿಕಾರಿಯೊಬ್ಬ ಇವತ್ತು ನಮ್ಮ ಎಸ್ಟೇಟಿನಲ್ಲಿ ಸುತ್ತು ಹೊಡೆಯುತ್ತಿದ್ದ. ಕೆಲವರು ಹೇಳುವಂತೆ ಎರಡು ದಿನಗಳ ಹಿಂದೆನೂ ಆತ ಕಾಣ್ಸಿಕೊಂಡಿದ್ದನಂತೆ. ಏಡುಕೊಂಡಲುವಿನ ಜನ ಅಂತ ಊಹೆ. ನಾನು ಇಲ್ಲಿಗೆ ಬರ್ತಾ ಇರ್ಬೇಕಾದ್ರೆ ಆ ಭಿಕಾರಿನ ಕಂಡೆ. ಅವ್ನು ನನ್ನನ್ನ ಫಾಲೋ ಮಾಡ್ತಿದ್ದಿರಬೇಕು ಯಾಕಂದ್ರೆ ನಾನು ತಿರುಗಿ ನೋಡಿದೊಡನೆ, ಅವ್ನು ಪಕ್ಕದ ಓಣಿಯಲ್ಲಿ ಮರೆಯಾದ. ಇವಿಷ್ಟನ್ನು ದಯವಿಟ್ಟು ಕರಮಚಂದರಿಗೆ ಹೇಳಿ."

ಚಿನ್ನಪ್ಪ ಕಾಲುಕಿತ್ತ ಕೆಲವು ನಿಮಿಷಗಳಲ್ಲೇ ಬಾಗಿಲ ಬಳಿಯಲ್ಲಿ ಭಿಕಾರಿಯೊಬ್ಬ ಕಾಣಿಸಿದ! ನಾನು ಜಾಗ್ರತನಾದೆ. ಚಿನ್ನಪ್ಪನ ಹಿಂಬಾಲಿಸಿದ ಆಸಾಮಿ!!

"ಬಿದ್ದಪ್ಪ, ನೀನು ವಿಪರೀತ ಯೋಚ್ನೆ ಮಾಡ್ತಿದ್ದ ಹಾಗಿದೆ! ಚಿನ್ನಪ್ಪ ನಿನ್ನ ತಲೆ ಕೆಡ್ಸಿರಬೇಕು... ಹ... ಹ್ಹಾ..."

ಪರಿಚಯದ ದನಿ... ಕರಮಚಂದನದ್ದು! ಆತನ ವೇಷ ಮಾತ್ರ ಅತ್ಯಂತ ಅದ್ಭುತವಾಗಿತ್ತು. ನನ್ಗೆ ಗುರುತೇ ಸಿಗಲಿಲ್ಲ.

"ಚಿನ್ನಪ್ಪ ಒಂದು ಸ್ಫೋಟಕ ಸುದ್ದಿ ಹೇಳ್ದ..." ಹಾಗೆಂದು ಚಿನ್ನಪ್ಪ ನನ್ನಲ್ಲಿ ಹೇಳಿದ್ದನ್ನು ಕರಮಚಂದನಲ್ಲಿ ಅರುಹಿದೆ. ಜೊತೆಗೆ ನಾನು ಅಂದು ಕುಟ್ಟಯ್ಯನ ಮನೆಯಲ್ಲಿ ರುದ್ರಮುನಿಯ ಕಪಾಟಿನ ಹಿಡಿಕೆ ಕಂಡಿದ್ದನ್ನೂ ಚಿನ್ನಪ್ಪನ ಮಾತಿಗೆ ಸಾಕ್ಷ್ಯವಾಗಿ ನೆನಪಿಸಿದೆ. ಕರಮಚಂದ ಗದ್ದದ